ಉದ್ಯಾನವನದ ಅಂಗವಾಗಿರುವುದಿಲ್ಲ ಇವುಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಯಾವುದೇ ಅಭ್ಯಂತರವಿರುವುದಿಲ್ಲ ಆದರೆ ಅರಣ್ಯ ಸಂರಕ್ಷಣಾ ಕಾಯ್ದೆ 1980 ಮತ್ತು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರನ್ವಯ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಯಾವುದೆ ಅರಣ್ಯೇತರ ಚಟುವಟಿಕೆ ಕೈಗೊಳ್ಳಲು ನಿಗದಿತ ಪ್ರಾಧಿಕಾರದಿಂದ ಮೂರ್ವಾನುಮತಿ ಅಗತ್ಯವಿರುತ್ತದೆ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ನಮೂನೆ 1ರಲ್ಲಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿ ಪ್ರಾಧಿಕಾರದಿಂದ ಅನುಮತಿ ಪಡೆದು ಮುಂದಿನ ಕ್ರಮ ಜರುಗಿಸಬಹುದಾಗಿದೆ ಮುಖ್ಯ ವನ್ಯಜೀವಿ ಪರಿಪಾಲಕರು, ಬೆಂಗಳೂರು ಇವರ ಪತ್ರ ಸಂಖ್ಯೆ ಡಿಡಬ್ಲ್ಯೂಎಲ್/ ಐಡಿಪಿ/ ಸಿಆರ್–43/ 2005–06 ದಿನಾಂಕ 5–1–2006ರಲ್ಲಿ ಸದರಿಯವರ ಅಧಿಕಾರ ವ್ಯಾಪ್ತಿಗೆ ಒಳಪಡಬಹುದಾದ ವನ್ಯಜೀವಿ ಕಾಯ್ದೆ ಉಲ್ಲಂಘನೆಯಾಗದ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುಮತಿ ನೀಡಿರುತ್ತಾರೆ

1 3 ಮೀ ಅಗಲದವರೆಗೆ ಈಗ ಇರುವ ಸರ್ವಋತು ಡಾಂಬರ್ ಹಾಕಿಲ್ಲದ ಮಾರ್ಗದ ಅಭಿವೃದ್ಧಿ ಮತ್ತು ನಿರ್ವಹಣೆ

2 ಮೋರಿ ಮತ್ತು ಸಣ್ಣ ಸಂಕಗಳ ನಿರ್ಮಾಣ

3 ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನ ಗಳಲ್ಲಿರುವಂತೆ ಅರಣ್ಯ ಬೆಳೆಯುವ ಸ್ಥಳದ ಅಭಿವೃದ್ಧಿ (Habitat Improvement) ಚಟುವಟಿಕೆಗಳಾದ ನೀರಿನ ಸೆಲೆಗಾಗಿ ಸಣ್ಣ ಅಣೆಕಟ್ಟುಗಳನ್ನು ಕಟ್ಟುವುದು, ನೀರಿನ ಸೆಲೆಯ ಇರುವ ಪ್ರದೇಶಗಳಲ್ಲಿ ಅಗೆದು ಅವುಗಳ ನಿರ್ವಹಣೆ, ಮಳೆ ನೀರು ಹಿಡಿದಿಡಲು ಮಣ್ಣಿನ ಕೆರೆಗಳ ಅಭಿವೃದ್ಧಿ

940 (159) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಬೀದರ್ ಜಿಲ್ಲೆಯಲ್ಲಿ ಈಗಾಗಲೇ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಸುಮಾರು 3000ಕ್ಕೆ ಮೇಲ್ಪಟ್ಟು ವಿತರಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಇದರಿಂದ ಹಿರಿಯ ನಾಗರಿಕರಿಗೆ ಯಾವ ಯಾವ ಸೌಲಭ್ಯಗಳು ಲಭಿಸುತ್ತವೆ,

ಇ) ಮಹಾರಾಷ್ಟ್ರದಲ್ಲಿ ಬಸ್ಸುಗಳಲ್ಲಿ ಶೇ 50% ಮಾತ್ರ ಟಿಕೇಟ್ ದರ ನೀಡುತ್ತಿರುವ ಮಾದರಿಯಲ್ಲೇ ಇಲ್ಲಿಯೂ ಸಹ ನೀಡಲಾಗುವುದೆ,

ಈ) ಈ ಬಗ್ಗೆ ಯಾವಾಗ ಕ್ರಮ ಜರುಗಿಸಲಾಗುವುದು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು)

ಅ) ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯ ಸ್ವಯಂ ಸೇವಾ ಸಂಸ್ಥೆಯ ಸಹಯೋಗದೊಂದಿಗೆ ಬೀದರ್ ಜಿಲ್ಲೆಯಲ್ಲಿ ಈವರೆಗೆ ಸುಮಾರು 1514 ಗುರುತಿನ ಚೀಟಿಯನ್ನು ಹಿರಿಯ ನಾಗರಿಕರಿಗೆ ವಿತರಿಸಿರುತ್ತದೆ

ಆ) 65 ವರ್ಷ ವಯೋಮಿತಿಗಿಂತ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ರಿಯಾಯಿತಿ ದರದ ಬಸ್ ಪಾಸ್‌ನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ನೀಡಲಾಗುತ್ತಿದೆ ಇದನ್ನು ಹೊರತುಪಡಿಸಿ ನೀಡುತ್ತಿರುವ ಗುರುತಿನ ಚೀಟಿಯ ಆಧಾರದ ಮೇಲೆ ಯಾವ ಸೌಲಭ್ಯಗಳನ್ನು ನೀಡುತ್ತಿಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

941 (1264) ಶ್ರೀ ರಘು ಎಸ್ (ಶಾಂತಿನಗರ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಮಿನಿಸ್ಟರಿ ಆಫ್ ಕಮ್ಯೂನಿಕೇಷನ್ ಗೃಹ ನಿರ್ಮಾಣ ಸಹಕಾರ ಸಂಘದವರು ಹೊಸಹಳ್ಳಿ, ಉತ್ತರಹಳ್ಳಿ ಮತ್ತು ಬಾಗಲೂರು ಗ್ರಾಮಗಳಲ್ಲಿ ಎಷ್ಟು ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿದ್ದಾರೆ, (ವಿವರ ಕೊಡುವುದು)

ಆ) ಈ ಸಂಘವು ಭೂ ಸುಧಾರಣಾ ಕಾಯ್ದೆ ಉಲ್ಲಂಘಿಸಿ ಜಮೀನು ಪಡೆಯಲಾಗಿದೆಯೇ,

ಇ) ಹಾಗಿದ್ದಲ್ಲಿ ಇವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಹೌದು ಪಡೆದಿದ್ದಾರೆ ಸಂಘವು ದಿನಾಂಕ 1-7-2004ರಂದು ಶ್ರೀ ಕೆ ಎಸ್ ಮಂಜುನಾಥ, ಎಂ ಸಿ ಎನ್ ಡೆವಲಪರ್ಸ್, ಬೆಂಗಳೂರು-92 ಎಂಬುವರೊಡನೆ ಕರಾರು ಮಾಡಿಕೊಂಡು ಬಡಾವಣೆ ನಿರ್ಮಿಸಲು ಹೊಸಹಳ್ಳಿ, ಜಾಲ ಹೋಬಳಿ, ಯಲಹಂಕ ತಾಲ್ಲೂಕು ಇಲ್ಲಿ 250 ರಿಂದ 280 ಎಕರೆ